**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>**

**<u>Spl.C.NDPS.1/2022</u>**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಂಜುನಾಥ |
| ತಂದೆಯ/ಗಂಡನ ಹೆಸರು | : | ಹನುಮಂತಪ್ಪ ಇ. |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಪಿ.ಸಿ., ದಾವಣಗೆರೆ ಸಿ.ಇ.ಎನ್. ಪೊಲೀಸ್ ಠಾಣೆ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 7

ಸಿ.ಡಬ್ಲ್ಯೂ 8

ದಿ:11-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>**

1. ಡಿಸೆಂಬರ್ 2020 ರಿಂದ ಡಿಸೆಂಬರ್ 2025 ರವರೆಗೆ ದಾವಣಗೆರೆಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿ.ಸಿ. ಆಗಿ ಕೆಲಸ ಮಾಡಿದ್ದೇನೆ. ದಿಃ 30-01-2021 ರಂದು ಚಾಸಾ-1 ರವರು ನನ್ನನ್ನು ಮತ್ತು ಇತರೆ ಸಿಬ್ಬಂದಿಗಳನ್ನು ಕರೆದು ದಾಳಿಗಾಗಿ ಹೋಗಬೇಕೆಂದು ತಿಳಿಸಿದರು. ಪೊಲೀಸ್ ಠಾಣೆಗೆ ನಾವು ಮಧ್ಯಾಹ್ನ 2.05 ಗಂಟೆಗೆ ಬಿಟ್ಟು ಬಿಳಿಚೋಡು ಪೊಲೀಸ್ ಠಾಣೆಯನ್ನು ತಲುಪಿದಾಗ ಮಧ್ಯಾಹ್ನ 3.00 ಗಂಟೆ ಆಗಿತ್ತು. ಅಲ್ಲಿ ಚಾಸಾ-1 ಮತ್ತು ಸಿಬ್ಬಂದಿಗಳು ಇದ್ದರು. ನಂತರ ಎರಡು ಸರ್ಕಾರಿ ಪಂಚರನ್ನು ಬರಮಾಡಿಕೊಂಡು ನಂತರ ಇಲಾಖಾ ವಾಹನದಲ್ಲಿ ಹೊರಟೆವು, ಸ್ಥಳವನ್ನು ತಲುಪಿದಾಗ 3.40 ಗಂಟೆ ಆಗಿತ್ತು. ಆ ಸ್ಥಳ ಅಂದರೆ ಅಜ್ಜಬೊಮ್ಮನಹಳ್ಳಿಯ ಸರ್ವೆ 16/7P3 ಇರುತ್ತದೆ. ಸದರಿ ಜಮೀನು ದಂಡ್ಯಪ್ಪ ತಂದೆ ಪಕೀರಪ್ಪ ಇವರ ಹೆಸರಿನಲ್ಲಿತ್ತು. ಆ ವ್ಯಕ್ತಿ ಅಲ್ಲಿ ಇದ್ದರು ಆ ವ್ಯಕ್ತಿಯನ್ನು ವಿಚಾರಿಸಿದಾಗ ಆ

ಜಮೀನು ತಮ್ಮದು ಅಂತ ಹೇಳಿದರು. ಆ ಜಮೀನಿನಲ್ಲಿ ಒಂದು ದನದ ಮನೆ ಇತತ್ತು, ಅದು ಸಹ ಅವರದ್ದೆ ಅಂತ ಹೇಳಿದರು. ಆ ಸ್ಥಳವನ್ನು ಶೋಧನೆ ಮಾಡಬೇಕು ಅಂತ ಹೇಳಿದೆವು. ನಂತರ ಪಂಚರ ಸಮಕ್ಷಮ ಪರಸ್ಪರ ಅಂಗ ಶೋಧನೆ ಮಾಡಿಕೊಂಡು ನಮ್ಮಲ್ಲಿ ಯಾವುದೇ ವಸ್ತುಗಳು ಇರಲಿಲ್ಲ. ಆದ್ದರಿಂದ ಪಂಚರ ಸಮಕ್ಷಮ ದನದ ಮನೆಯ ಒಳಗಡೆ ಹೋಗಿ ನೋಡಿದಾಗ ಅಲ್ಲಿ ಒಂದು ಹಲಗೆ ಇತ್ತು ಅದರ ಮೇಲೆ ಒಂದು ರಟ್ಟಿನ ಬಾಕ್ಸ ಇತ್ತು. ಆ ರಟ್ಟಿನ ಬಾಕ್ಸ ಒಳಗಡೆ ನೀಲಿ ಬಣ್ಣದ ಕವರ್ ಇತ್ತು. ದಂಡ್ಯಪ್ಪರವರ ಕೈಯಲ್ಲಿ ಅದನ್ನು ತೆಗೆಸಿ ನೋಡಿದಾಗ ಅದರಲ್ಲಿ ಗಾಂಜಾ ಸೊಪ್ಪು ಇತ್ತು. ಅದರ ಬಗ್ಗೆ ಚಾಸಾ-1 ರವರು ದಂಡ್ಯಪ್ಪರವರನ್ನು ವಿಚಾರಿಸಿದಾಗ ಅದನ್ನು ತನ್ನ ಜಮೀನಿನಲ್ಲಿ ಬೆಳೆದಿರುವುದಾಗಿ ಹೇಳಿದರು. ಆದ್ದರಿಂದ ಅದನ್ನು ಪಂಚರ ಸಮಕ್ಷಮ ತೂಕ ಮಾಡಲಾಯಿತು. ಅದು ಒಟ್ಟು 380 ಗ್ರಾಂ. ಇತ್ತು. ಅದರಲ್ಲಿ 100 ಗ್ರಾಂ. ಮಾದರಿಯಾಗಿ ತೆಗೆದು ಬಾಕಿ ಗಾಂಜಾವನ್ನು ಬಿಳಿ ಚೀಲದಲ್ಲಿ ಹಾಕಿ KSP ಅಂತ ಸೀಲ್ ಮಾಡಲಾಯಿತು.

2. ಚಾಸಾ-1 ರವರು ಆ ಗಾಂಜಾ ಬೆಳೆದ ಸ್ಥಳವನ್ನು ತೋರಿಸಲು ಹೇಳಿದ್ದು, ಆಗ ದಂಡ್ಯಪ್ಪರವರು ದನದ ಮನೆಯ ಹಿಂಭಾಗದ ಜಮೀನಿನಲ್ಲಿ ಬದನೆಕಾಯಿ ಬೆಳೆದಿರುವ ಮಧ್ಯದಲ್ಲಿ ಗಾಂಜಾ ಗಿಡಗಳನ್ನು ಬೆಳೆದಿದ್ದು ಅದನ್ನು ತೋರಿಸಿದರು. ಆ ಗಾಂಜಾದ ಗಿಡದ ಸಸಿಗಳನ್ನು ತೆಗೆಯಲು ಚಾಸಾ-1 ರವರು ಒಬ್ಬ ವ್ಯಕ್ತಿಯನ್ನು ಕರೆದುಕೊಂಡು ಬರಲು ಹೇಳಿದರು, ನಾನು ಪಕ್ಕದ ಜಮೀನಿನಲ್ಲಿದ್ದ ಒಬ್ಬ ವ್ಯಕ್ತಿಯನ್ನು ಕರೆದುಕೊಂಡು ಬಂದೆ, ಅವರ ಹೆಸರು ಬಸವರಾಜ ಅಂತ ಹೇಳಿದರು. ಅವರು ಗಿಡಗಳನ್ನು ಕೀಳಲು ಒಪ್ಪಿಕೊಂಡರು. ಅವರಿಂದ ಗಿಡಗಳನ್ನು ಕೀಳಿಸಿ ನೋಡಿದಾಗ ಅವು ಗಾಂಜಾ ಗಿಡಗಳು ಇದ್ದವು, ಅವು 45 ಇಂಚಿನ 08 ಗಿಡಗಳು, 30 ಇಂಚಿನ 24 ಗಿಡಗಳು ಇದ್ದವು. ನಂತರ ಅವುಗಳನ್ನು ಬೇರು ಸಮೇತ ತೂಕ ಮಾಡಿದಾಗ 625 ಗ್ರಾಂ. ತೂಕ ಇತ್ತು. ಅದರ ಪೈಕಿ ಮಾದರಿಯಾಗಿ 125 ಗ್ರಾಂ. ತೆಗೆದು, ಉಳಿದ ಗಾಂಜಾವನ್ನು ಪ್ರತ್ಯೇಕ ಚೀಲದಲ್ಲಿ ಹಾಕಿ ಪ್ಯಾಕ್ ಮಾಡಿ KSP ಅಂತ ಸೀಲ್

ಮಾಡಲಾಯಿತು. ಮತ್ತೆ ಹೇಳುತ್ತೇನೆ ಗಿಡಗಳನ್ನು ತೂಕ ಮಾಡಿದಾಗ ಅದು ಒಟ್ಟು 650 ಗ್ರಾಂ. ತೂಕ ಇತ್ತು. ಈ ಪಂಚನಾಮೆಯನ್ನು 4.00 ರಿಂದ 5.45 ರವರೆಗೆ ಮಾಡಲಾಯಿತು. ನಿಪಿ-2 ರಲ್ಲಿ ನನ್ನ ಸಹಿ ಇದ್ದು, ಅದನ್ನು ನಿಪಿ-2(ಇ) ಅಂತ ಗುರುತಿಸಲಾಯಿತು. ಆ ಸಮಯದಲ್ಲಿ ನಿಪಿ-4 ರಿಂದ 21 ರಂತೆ ಪೋಟೋ ತೆಗೆದಿರುತ್ತಾರೆ. ಮಾದರಿಯಾಗಿ ತೆಗೆದದಿರುವಂತಹ ಗಾಂಜಾವನ್ನು ಈಗ ನೋಡುತ್ತಿದ್ದು, ಅದು ಮು.ಮಾ.1 ಮತ್ತು 2 ಇರುತ್ತದೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ. ನಂತರ ಆರೋಪಿ ಮತ್ತು ಮಾಲಿನೊಂದಿಗೆ ಪೊಲೀಸ್ ಠಾಣೆಗೆ ಬಂದೆವು.

**ಪಾಟೀ ಸವಾಲುಃ ಆರೋಪಿತರ ಪರವಾಗಿ**:

3. ಅದು ನೀರಾವರಿ ಜಮೀನು ಅಂದರೆ ಸುಳ್ಳು. ಆ ಜಮೀನಿನ ಸುತ್ತಮುತ್ತಲು ಇರುವ ಜಮೀನು ನೀರಾವರಿ ಜಮೀನು ಅಂದರೆ ಸುಳ್ಳು. ದನದ ಕೊಟ್ಟಿಗೆಯಲ್ಲಿ ಇದ್ದಂಹತ ಗಾಂಜಾದಲ್ಲಿ ಸೊಪ್ಪು ಮತ್ತು ಕಾಯಿಯನ್ನು ಬೇರ್ಪಡಿಸಿದ್ದೀರಾ ಅಂದರೆ ಕಾಂಡ ಇರಲಿಲ್ಲ ಸೊಪ್ಪು ಮತ್ತು ಹೂವು ಮಾತ್ರ ಇತ್ತು. ಆ ಸೊಪ್ಪು ಮತ್ತು ಹೂವನ್ನು ಬೇರ್ಪಡಿಸಿಲ್ಲ. ಆ ಬದನೆಗಿಡ ಆ ಜಮೀನಿನ ಅರ್ಧ ಭಾಗ ಇತ್ತು, ಇನ್ನೂ ಅರ್ಧ ಭಾಗ ರಾಗಿ ಇತ್ತು. ಅದರ ಸಾಲು ಪೂರ್ವ-ಪಶ್ಚಿಮವಾಗಿತ್ತೋ ಅಥವಾ ಉತ್ತರ -ದಕ್ಷಿಣವಾಗಿ ಇತ್ತೋ ಅಂತ ನನಗೆ ಹೇಳಲು ಆಗುವುದಿಲ್ಲ.

4. ಯಾವ ಯಾವ ಸಾಲುಗಳಲ್ಲಿ ಎಷ್ಟೆಷ್ಟು ಗಾಂಜಾ ಗಿಡಗಳು ಇದ್ದವು ಅದತ ಹೇಳಲು ಬರುವುದಿಲ್ಲ. ಅದರಲ್ಲಿದ್ದಂತಹ ಹೂವು ಮತ್ತು ಕಾಯಿ ಬೇರ್ಪಡಿಸಿಲ್ಲ. ದನದ ಕೊಟ್ಟಿಗೆಯಲ್ಲ್ ಯಾವುದೇ ಗಾಂಜಾ ಸೊಪ್ಪು ಇರಲಿಲ್ಲ ಮತ್ತು ಜಮೀನಿನಲ್ಲಿ ಯಾವುದೇ ಗಾಂಜಾ ಗಿಡಗಳು ಇರಲಿಲ್ಲ ಅಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಅಲ್ಲಿ ಗಾಂಜಾ ಇತ್ತು ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಲ್ಲಿ ಯಾವುದೇ ಗಾಂಜಾ ಇರಲಿಲ್ಲ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.